ಪಿ.ಡಬ್ಲ್ಯೂ:2

ದಿನಾಂಕ : 07-08-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ದಾವಾ ಷೆಡ್ಯೂಲ್ 1 ಮತ್ತು 25 ಸ್ವತ್ತುಗಳು ಒಂದೇ ಖಾನುಷುಮಾರಿಗೆ ಸಂಬಂಧಿಸಿದ ಸ್ವತ್ತುಗಳೆಂದರೆ ಸರಿಯಲ್ಲ . ನಿಪಿ-16 ಮತ್ತು 18 ದಾಖಲೆಗಳೂ ಖಾನುಷುಮಾರಿ ನಂ . 49 ಕ್ಕೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿಯಲ್ಲ . ದಿಃ 14-10-1974 ರಂದು ನನ್ನ ತಂದೆ ಖಾನುಷುಮಾರಿ ನಂ . 49 ನ್ನು ಖರೀದಿಸಿದ್ದಾರೆ ಎಂಬುದಾಗಿ ಸದರಿ ದಾಖಲೆಗಳನ್ನು ಸಲ್ಲಿಸಿದ್ದೇನೆ ಎಂದರೆ ನನ್ನ ತಂದೆ ಖರೀದಿಸಿರುವುದು ಎಂದು ಹೇಳಿದ್ದಾರೆ . 1974 ನೇ ಸಾಲಿನಲ್ಲಿ ಖಾನುಷುಮಾರಿ ನಂ. 49 ರ ಸ್ವತ್ತು ಚಿಕ್ಕಯ್ಯ ರವರ ಹೆಸರಿನಲ್ಲಿ ಇರಲಿಲ್ಲ ಗಂಗಲಕ್ಕಯ್ಯ ರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 3 ನೇ ಸ್ವತ್ತಿನ ಮಾಲಿಕತ್ವ ದೊಡ್ಡಸಂಜೀವಯ್ಯ ರವರ ಹೆಸರಿನಲ್ಲಿ ಇರಲಿಲ್ಲ , ಲಿಂಗಪ್ಪ ರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ . 1978 ನೇಸಾಲಿನಲ್ಲಿ ದಾವಾ ಷೆಡ್ಯೂಲ್ 4 ನೇ ಸ್ವತ್ತು ಶ್ರೀನಿವಾಸ ಅಯ್ಯಂಗಾರ್ ರವರ ಹೆಸರಿನಲ್ಲಿತ್ತು ಅಪ್ರಮೇಯ ಅಯ್ಯಂಗಾರ್ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ . ದಾವಾ ಷೆಡ್ಯೂಲ್ 5 ನೇ ಸ್ವತ್ತು ಮುರಾರಯ್ಯ ರವರ ಹೆಸರಿನಲ್ಲಿತ್ತು ,ಓಬಳಯ್ಯ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 7 ರಿಂದ 11 ನೇ ಸ್ವತ್ತು ಅಬ್ದುಲ್ ಖಾದರ್ ಸಾಬ್ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 12 ನೇ ಸ್ವತ್ತು 1980 ನೇ ಸಾಲಿನಲ್ಲಿ ಸಂಪಿಗೆರಾಯಶೆಟ್ಟಿ ರವರ

ಹೆಸರಿನಲ್ಲಿತ್ತು , ದೊಡ್ಡಸಂಜೀವಯ್ಯ ರವರ  ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 13 ನೇ ಸ್ವತ್ತು ಸಂಜೀವಯ್ಯ ಬಿನ್ ನಾಯಕ ರವರ ಹೆಸರಿನಲ್ಲಿತ್ತು , ದೊಡ್ಡಸಂಜೀವಯ್ಯ ರವರ  ಹೆಸರಿನಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಇರಬಹುದು ಆದರೆ ನನ್ನ ತಂದೆ ಖರೀದಿಸಿದ್ದಾರೆ ಎಂದು ತಿಳಿಸಿದ್ದಾರೆ .  ದಾವಾ ಷೆಡ್ಯೂಲ್ 14 ನೇ ಸ್ವತ್ತು ಹುಚ್ಚ ನಾಯಕ ರವರ ಹೆಸರಿನಲ್ಲಿತ್ತು , ಹುಚ್ಚಯ್ಯ ರವರ ಕಡೆಯಿಂದ  ನಿಮ್ಮ ತಂದೆ ಸ್ವತ್ತನ್ನು ಖರೀದಿಸಿದ್ದಾರೆ ಎಂದರೆ ಯಾರ  ಹೆಸರಿನಲ್ಲಿತ್ತು ಎಂದು ಗೊತ್ತಿಲ್ಲ , ನನ್ನ ತಂದೆ ಖರೀದಿಸಿದ್ದಾರೆ ಎಂದು ತಿಳಿಸಿದ್ದಾರೆ .ದಾವಾ ಷೆಡ್ಯೂಲ್ 15 ನೇ ಸ್ವತ್ತು  ಸಂಪಿಗೆರಾಯಪ್ಪ ರವರ ಹೆಸರಿನಲ್ಲಿತ್ತು , ಆಂಜನೇಯ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ  ಸರಿಯಲ್ಲ . ದಾವಾ ಷೆಡ್ಯೂಲ್ 16 ನೇ ಸ್ವತ್ತು  ಗಫೂರ್ ಸಾಬ್ ರವರ  ಹೆಸರಿನಲ್ಲಿ ಇರಲಿಲ್ಲ , ಗಿರಿಯಪ್ಪ ಬಿನ್ ತಿಮ್ಮಯ್ಯ ರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 17 ನೇ ಸ್ವತ್ತು  ಕರಿಯಪ್ಪ ಬಿನ್ ಭೈರಪ್ಪ ರವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 18 ನೇ ಸ್ವತ್ತು ಗಂಗಯ್ಯ ಬಿನ್ ಚೆಲುವಯ್ಯ  ರವರ ಹೆಸರಿನಲ್ಲಿ ಇರಲಿಲ್ಲ  ದೊಡ್ಡಹುಚ್ಚಯ್ಯ ರವರ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸರಿಯಲ್ಲ .  ದಾವಾ ಷೆಡ್ಯೂಲ್ 19 ನೇ ಸ್ವತ್ತು ರಾಮಣ್ಣ ಬಿನ್ ತಿಮ್ಮಯ್ಯ  ರವರ ಹೆಸರಿನಲ್ಲಿ ಇರಲಿಲ್ಲ ದೊಡ್ಡಹುಚ್ಚಯ್ಯ ರವರ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 20 ನೇ ಸ್ವತ್ತು  ನರಸಯ್ಯ ಬಿನ್ ಹನುಮಂತಯ್ಯ  ರವರ ಹೆಸರಿನಲ್ಲಿ ಇರಲಿಲ್ಲ , ನರಸಯ್ಯ ಬಿನ್ ನರಸಯ್ಯ ರವರ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 23 ನೇ ಸ್ವತ್ತು ಜವರಯ್ಯ ಬಿನ್ ಹುಚ್ಚವೀರಯ್ಯ  ರವರ ಹೆಸರಿನಲ್ಲಿ ಇರಲಿಲ್ಲ ,  ಚನ್ನಬಸವೇಗೌಡ ರವರ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸರಿಯಲ್ಲ .

ದಾವಾ ಷೆಡ್ಯೂಲ್ 24 ನೇ ಸ್ವತ್ತು ಮಾಸಯ್ಯ  ರವರ ಹೆಸರಿನಲ್ಲಿ ಇರಲಿಲ್ಲ ಮರಿಯಪ್ಪ ಬಿನ್ ಕೆಂಪನಾಯಕ ಯ ರವರ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸರಿಯಲ್ಲ

. ಮೇಲೆ ಹೇಳಿದ ಸ್ವತ್ತುಗಳೆಲ್ಲವೂ ನಮ್ಮ ಸ್ವಾ ಧೀನದಲ್ಲಿ ಬ್ಯಾಡಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದೆ ಎಂದರೆ ಸರಿಯಲ್ಲ . ಸದರಿ ಗ್ರಾಮ ಠಾಣೆ ವ್ಯಾಪ್ತಿಯಲ್ಲಿ ಭೈರವೇಶ್ವರ ದೇವಸ್ಥಾನವಿದೆ ಎಂದರೆ ಸರಿ . ದಾವ ಷೆಡ್ಯೂಲ್ ನಿವೇಶನಗಳು ಪ್ರಸ್ತುತ ತಲಾ ಒಂದುವರೆ ಯಿಂದ 2 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿ . ಎಲ್ಲಾ ಸ್ವತ್ತುಗಳನ್ನು ಸೇರಿಸಿ ಕೇವಲ ರೂ. 6,43,000/- ಬೆಲೆ ಬಾಳುತ್ತಿದೆ ಎಂದು ಸುಳ್ಳು ವಿವರಗಳನ್ನು ನಮೂದಿಸಿ ಕೇವಲ 200 ರೂ ನ್ಯಾಯಾಲಯದ ಶುಲ್ಕ ಪಾವತಿಸಿದ್ದೇನೆ ಎಂದರೆ ಸರಿಯಲ್ಲ . ಪ್ರಸುತ್ತ ದಾವಾ ನಿವೇಶನಗಳು 50-60 ಲಕ್ಷ ಬೆಲೆ ಬಾಳುತ್ತದೆ ಎಂದರೆ ಸರಿ . ನಿವೇಶನಗಳಿಗೆ ಸಂಬಂಧಿಸಿ ಖಾತೆ ಮಾಡಿಕೊಡುವಂತೆ ಕೋರಿ EO ರವರ ಬಳಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ . ಅದರ ಪ್ರಕರಣ ಸಂಖ್ಯೆ 9/2019-20 ರಂತೆ ಚಾಲ್ತಿಯಲ್ಲಿದೆ ಎಂದರೆ ಸರಿ . EO ನ್ಯಾಯಾಲಯದಲ್ಲಿ ಕ್ರಯ ಪತ್ರಗಳನ್ನು ಸಲ್ಲಿಸಿದ್ದೆವು ಖಾತೆಗಳು ಮತ್ತು ಮಾರಾಟಗಾರರ ವಿವರಗಳು ವ್ಯಾತ್ಯಾಸವಿದ್ದ ಕಾರಣ ಸಿವಿಲ್ ನ್ಯಾಯಾಲಯದಲ್ಲಿ ತೀರ್ಮಾನಿಸಿಕೊಳ್ಳಿ ಎಂದು ತೀರ್ಪು ನೀಡಲಾಗಿದೆ ಎಂದರೆ ಸರಿ . ನಾನು ದಾವಾ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿಲ್ಲ , ನನ್ನ ತಂದೆ ಕ್ರಯ ಪತ್ರವನ್ನು ಸೃಷ್ಟಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ . ದಾವಾ ನಿವಶೇನಗಳಲ್ಲಿ ಇಂದಿಗೂ ಸ್ವಾಧೀನ ಹೊಂದಿದ್ದೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇವೆ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದ

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ. ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ.